**ಪಾಠ–6** **ಫೆಬ್ರವರಿ 1–7**

# ಉದ್ಧಟತನದಿಂದ ನಾಶದೆಡೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 5ನೇ ಅಧ್ಯಾಯ, ಪ್ರಕ 17:4–6, ಕೀರ್ತ 96:5; ಕೊಲಸ್ಸೆ 1:15–17, ರೋಮ 1:16–32, ಪ್ರಸಂಗಿ 8:11, ಪ್ರಕ 14:8.

**ಸ್ಮರಣವಾಕ್ಯ : ಕಾಲ ಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ; ಜ್ಞಾನಿಗಳ ಜ್ಞಾನವು, ವಿವೇಕಿಗಳ ವಿವೇಕವು ಆತನ ವರವೇ (ದಾನಿಯೇಲ 2:21).**

ದಾನಿಯೇಲ 5ನೇ ಅಧ್ಯಾಯವು ಮಾನವನ ಗರ್ವವು ಆಘಾತಕಾರಿ, ನಾಟಕೀಯ ರೀತಿಯಲ್ಲಿ ಅಂತ್ಯಗೊಳ್ಳುವ ಒಂದು ಬಲವಾದ ಉದಾಹರಣೆಯನ್ನು ಕೊಡುತ್ತದೆ. ನೆಬೂಕದ್ನೆಚ್ಚರನು ತನ್ನ ಜೀವಿತದಲ್ಲಿ ಪಾಠ ಕಲಿಯುವುದಕ್ಕೆ ಬಹಳ ಸಮಯ ತೆಗೆದುಕೊಂಡನು, ಅಂತು ತಡವಾಗಿಯಾದರೂ ಪಾಠ ಕಲಿತನು. ಆದರೆ ಆತನ ಮೊಮ್ಮಗನಾದ ಬೇಲ್ಶಚ್ಚರನು ಪಾಠ ಕಲಿಯಲಿಲ್ಲ. ಆತನು ದೇವಾಲಯದ ಪಾತ್ರೆಗಳನ್ನು ಅರಮನೆಯ ಪಾನಗೋಷ್ಠಿಯಲ್ಲಿ ಉಪಯೋಗಿಸಿ ಅವುಗಳನ್ನು ಅಪವಿತ್ರಗೊಳಿಸಿದನು. ಅಂತಹ ಅಪವಿತ್ರಗೊಳಿಸುವ ಕಾರ್ಯವು ದೇವರಿಗೆ ಸವಾಲು ಹಾಕುವುದಕ್ಕೆ ಮಾತ್ರವಲ್ಲ ದೇವರ ಮೇಲೆ ಆಕ್ರಮಣ ಮಾಡಿದುದಕ್ಕೆ ಸಮಾನವಾಗಿದೆ.

ಹಾಗಾಗಿ ಬೇಲ್ಶೆಚ್ಚರನು ತನ್ನ ಆಕ್ರಮಣಗಳ ಪಾತ್ರೆಯು ತುಂಬುವಂತೆ ಚಿಕ್ಕ ಕೊಂಬಿನ ಹಾಗೆ ಪ್ರವರ್ತಿಸಿದನು (ದಾನಿ 8ನೇ ಅಧ್ಯಾಯ). ಈ ಕೊಂಬು ದೇವದರ್ಶನಗುಡಾರದ ಅಸ್ತಿವಾರದ ಮೇಲೆ ಧಾಳಿ ಮಾಡುತ್ತದೆ. ಆತನನ್ನು ರಾಜ್ಯಾಧಿಕಾರದಿಂದ ತೆಗೆದುಹಾಕಿ, ಅಂತ್ಯಕಾಲದಲ್ಲಿ ತನ್ನ ಜನರ ವೈರಿಗಳ ವಿರೋಧವಾಗಿ ದೇವರು ತಾನೇನು ಸಾಧಿಸುತ್ತಾನೋ ಅದನ್ನು ತೋರಿಸಿಕೊಟ್ಟಿದ್ದಾನೆ. ದಾನಿಯೇಲ 5ನೇ ಅಧ್ಯಾಯದಲ್ಲಿ ಹೇಳಿರುವ ಘಟನೆಗಳು ಕ್ರಿ.ಪೂ. 539ನೇ ವರ್ಷದಲ್ಲಿ ನಡೆಯಿತು. ಆ ರಾತ್ರಿಯಲ್ಲಿ ಬ್ಯಾಬಿಲೋನು ಮೇದ್ಯಪಾರಸಿಯ ಸೇನೆಯ ವಶವಾಯ್ತು. ಈವಾಗ ಬಂಗಾರವು ಹೋಗಿ ಬೆಳ್ಳಿಯು ಬಂದದ್ದನ್ನು ವಿವರಿಸುತ್ತದೆ (ದಾನಿ 2ನೇ ಅಧ್ಯಾಯ). ದೇವರು ಲೋಕದ ಎಲ್ಲರ ವ್ಯವಹಾರಗಳನ್ನು ನಡಿಸುತ್ತಾನೆ ಎಂಬುದಕ್ಕೆ ಮತ್ತೊಮ್ಮೆ ಇದು ಸಾಕ್ಷಿಯಾಯಿತು.

ಈ ವಾರದ ಪಾಠವನ್ನು ಫೆಬ್ರವರಿ 8ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಫೆಬ್ರವರಿ 2**

## ಬೇಲ್ಶೆಚ್ಚರನ ಔತಣ

ಓದಿರಿ : ದಾನಿಯೇಲ 5:1–4 ಜೊತೆಗೆ ದಾನಿಯೇಲ 1:1,2ನ್ನು ಓದಿರಿ. ಅತಿ ಕೆಟ್ಟದಾಗಿರುವ ಯಾವುದನ್ನು ಬೇಲ್ಶೆಚ್ಚರನು ಮಾಡುತ್ತಿದ್ದಾನೆ? ಇದು ಆತನ ನಿಜವಾದ ಚಾರಿತ್ರ್ಯವನ್ನು ತೋರಿಸುತ್ತದೆ ಹೇಗೆ? ಈತನ ಕೃತ್ಯಗಳನ್ನು ಪ್ರಕ 17:4–6ರ ಜೊತೆ ಹೋಲಿಸಿರಿ. ಇಲ್ಲಿ ಸಮಾಂತರವಾದ ಯಾವುದನ್ನು ಕಾಣುತ್ತೇವೆ?

ರಾಜನು ಯೆರೂಸಲೇಮಿನ ದೇವಾಲಯದಿಂದ ತಂದ ಪವಿತ್ರವಾದ ಪಾತ್ರೆಯನ್ನು ಮದ್ಯಪಾನ ಕುಡಿಯುವ ಪಾತ್ರೆಗಳಂತೆ ಉಪಯೋಗಿಸಲು ಅಪ್ಪಣೆ ಕೊಡುತ್ತಾನೆ. ನೆಬೂಕದ್ನೆಚ್ಚರನು ಯೆರೂಸಲೇಮಿಗೆ ಮುತ್ತಿಗೆ ಹಾಕಿದಾಗ ದೇವಾಲಯದ ಪಾತ್ರೆಗಳನ್ನು ಕೊಂಡೊಯ್ದು ತನ್ನ ದೇವರ ಆಲಯದಲ್ಲಿ ಇಟ್ಟಿದ್ದನು. ಆ ಪಾತ್ರೆಗಳನ್ನು ಯಾವುದಕ್ಕೂ ಬಳಸದೆ ಅವುಗಳ ಪಾವಿತ್ರ್ಯತೆ

ಭಂಗವಾಗದ ಹಾಗೆ ಇಟ್ಟಿದ್ದನು. ಆದರೆ ಬೇಲ್ಶೆಚ್ಚರನು ಅವುಗಳ ಪಾವಿತ್ರ್ಯಕ್ಕೆ ಭಂಗವಾಗುವ ಹಾಗೆ ಆ ಪಾತ್ರೆಗಳನ್ನು ಬಹಳ ತುಚ್ಛವಾಗಿ ಕುಡಿಯುವುದಕ್ಕಾಗಿ ಉಪಯೋಗಿಸಿದನು. ಅವನ ರಾಜ್ಯದ ಪ್ರಭುಗಳು ಆ ಬಂಗಾರದ ಪಾತ್ರೆಗಳಲ್ಲಿ ದ್ರಾಕ್ಷಾರಸವನ್ನು ಕುಡಿದು ಬಂಗಾರ ಬೆಳ್ಳಿ ತಾಮ್ರ ಕಬ್ಬಿಣ ಮರಕಲ್ಲುಗಳ ದೇವರುಗಳನ್ನು ಸ್ತುತಿಸಿದರು (ದಾನಿ 5:4). ಇಲ್ಲಿ ಆರು ತರದ ಸಾಮಗ್ರಿಗಳನ್ನು ಉಪಯೋಗಿಸಿರುವುದನ್ನು ಗಮನಿಸಬಹುದು. ಬ್ಯಾಬಿಲೋನಿಯರು ದಶಮಾನ ಪದ್ಧತಿಯ ಬದಲು ಷಷ್ಠಿ ಪದ್ಧತಿಯನ್ನು ಲೆಕ್ಕಾಚಾರಕ್ಕಾಗಿ ಉಪಯೋಗಿಸುತ್ತಿದ್ದರು. (ಈ ಪದ್ಧತಿಯು ಸಂಖ್ಯೆ ಅರವತ್ತರ ಮೇಲೆ ಆಧಾರಗೊಂಡಿದೆ). ಹಾಗಾಗಿ ಆರು ಬಗೆಯ ದೇವರುಗಳು ಬ್ಯಾಬಿಲೋನಿನ ದೇವತೆಗಳ ಮತ್ತು ಅದರ ಧಾರ್ಮಿಕ ಪದ್ಧತಿಯ ಪೂರ್ಣತೆಯನ್ನು ಪ್ರತಿನಿಧಿಸುತ್ತದೆ. ಈ ಸಾಮಗ್ರಿಗಳ ಕ್ರಮವು ನೆಬೂಕದ್ನೆಚ್ಚರನ ಕನಸಿನ ಪ್ರತಿಮೆಯ ಅಂಗಗಳ ಕ್ರಮವನ್ನು ಅನುಸರಿಸಿರುವುದು ಸಾಕಷ್ಟು ಆಸಕ್ತಿಕರವಾಗಿದೆ. ಇದಕ್ಕೆ ಹೊರತಾದ ಮರವು ಮಣ್ಣಿನ ಸ್ಥಾನದಲ್ಲಿದೆ. ಕನಸಿನ ಪ್ರತಿಮೆಯ ಕಡೆಯ ಸಾಮಗ್ರಿ ಕಲ್ಲು. ಇದು ವಿಗ್ರಹಗಳನ್ನು ಕೆತ್ತುವ ಸಾಮಗ್ರಿಯಾಗಿದ್ದಾಗ್ಯೂ ಲೋಕದ ಸಾಮ್ರಾಜ್ಯಗಳ ಮೇಲೆ ದೇವರು ವಿಧಿಸುವ ನ್ಯಾಯತೀರ್ಪನ್ನು 'ಕಲ್ಲು' ಸಂಕೇತಿಸುತ್ತದೆ (ದಾನಿ 2:44, 45ನ್ನು ನೋಡಿರಿ).

ಈ ಉತ್ಸವವು ಪ್ರಕಟಣೆ ಪುಸ್ತಕದಲ್ಲಿ ನೋಡಿದಂತೆ ಅಂತ್ಯಕಾಲದ ಬ್ಯಾಬಿಲೋನನ್ನು ಯುಕ್ತವಾದ ರೀತಿಯಲ್ಲಿ ಪ್ರತಿನಿಧಿಸುತ್ತದೆ. ಅಂತ್ಯಕಾಲದ ಬ್ಯಾಬಿಲೋನನ್ನು ಪ್ರತಿನಿಧಿಸುವ ಸ್ತ್ರೀಯು ಬೇಲ್ಶೆಚ್ಚರನಂತೆ ಬಂಗಾರದ ಬಟ್ಟಲನ್ನು ಕೈಯಲ್ಲಿ ಹಿಡಿದಿದ್ದಳು. ಆ ಬಟ್ಟಲು ಆಕೆಯ ಜಾರತ್ವವೆಂಬ ದ್ರಾಕ್ಷಾರಸದಿಂದ ತುಂಬಿತ್ತು ಮತ್ತು ಆಕೆಯು ಅದನ್ನು ಭೂರಾಜರಿಗೆ ಕುಡಿಸಿದಳು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆಧುನಿಕ ಬ್ಯಾಬಿಲೋನನು ತನ್ನ ಮೇಲೆ ಶೀಘ್ರವಾಗಿ ಬರುವ ದೇವರ ನ್ಯಾಯತೀರ್ಪನ್ನು ಮರೆತುಬಿಟ್ಟು ತನ್ನ ಮಿಥೋಪದೇಶಗಳಿಂದಲೂ, ತಿರುಚಿದ ಆರಾಧನೆಯ ಪದ್ಧತಿಯಿಂದಲೂ ಲೋಕವನ್ನು ಕೆಟ್ಟದಕ್ಕೆ ಎಳೆಯುತ್ತದೆ (ಪ್ರಕಟನೆ 17:4–6). ಒಂದು ದಿನ ನ್ಯಾಯತೀರ್ಪು ಬಂದೇ ಬರುತ್ತದೆ.

ನಮ್ಮ ಸಮಾಜ ಮತ್ತು ಸಂಸ್ಕೃತಿಗಳು ಯಾವ ರೀತಿಯಲ್ಲಿ ದೇವರ ಸತ್ಯವನ್ನು ಅಶುದ್ಧಗೊಳಿಸುತ್ತವೆ? ಅವುಗಳ ಜೊತೆ ರಹಸ್ಯವಾಗಿಯೂ ಸೇರದ ಹಾಗೆ ನಾವು ಹೇಗೆ ಎಚ್ಚರಿಕೆಯನ್ನು ವಹಿಸಬಹುದು? ಸಬ್ಬತ್ತಿನ ದಿನದಲ್ಲಿ ನಿಮ್ಮ ಉತ್ತರಗಳನ್ನು ತರಗತಿಗಳಿಗೆ ತನ್ನಿರಿ.

**ಸೋಮವಾರ** **ಫೆಬ್ರವರಿ 3**

## ಕರೆಯದ ಅತಿಥಿ

ಓದಿರಿ : ದಾನಿಯೇಲ 5:5–8 ಇಲ್ಲಿ ಏನು ಜರುಗಿತು, ರಾಜನು ಆ ರೀತಿಯಾಗಿ ಪ್ರತಿಕ್ರಿಯಿಸಲು ಕಾರಣವೇನು? ದಾನಿಯೇಲ 2ನೇ ಅಧ್ಯಾಯಕ್ಕೆ ಇದು ಯಾವ ರೀತಿಯಲ್ಲಿ ಹೋಲುತ್ತದೆ (ಸಮವಾಗಿದೆ) ಮತ್ತು ಈ ಸಮಾನತೆಯು ಯಾಕೆ ಮುಖ್ಯವಾಗಿದೆ? (ಕೀರ್ತ 96:5 ಮತ್ತು ಕೊಲಸ್ಸೆ 1:15–17ನ್ನು ನೋಡಿರಿ).

ಹಿಂದೆ ನೆಬೂಕದ್ನೆಚ್ಚರನು ತನಗೆ ಒದಗಿದ ಬಿಕ್ಕಟ್ಟಿನಲ್ಲಿ (ದಾನಿ 2:2, ಮತ್ತು 4:7) ಮಾಡಿದಂತೆಯೇ ಬೇಲ್ಶೆಚ್ಚರನು ಗೋಡೆಯ ಮೇಲೆ ಬರೆಯಲ್ಪಟ್ಟ ಬರಹದ ಅರ್ಥವನ್ನು ತಿಳಿದುಕೊಳ್ಳಲು ಬ್ಯಾಬಿಲೋನಿನ ಮಂತ್ರವಾದಿ ಪಂಡಿತರ ಶಾಕುನಿಕರನ್ನು ಕರೆಯಿಸಿದನು. ಅವರು ಅದನ್ನು ಉತ್ತಮವಾಗಿ ಹೊರತುಪಡಿಸುವುದನ್ನು ಖಾತ್ರಿ ಮಾಡಲು ಅವರಿಗೆ ದೊಡ್ಡ ಮಾನ ಬಹುಮಾನಗಳನ್ನು ಘೋಷಿಸಿದನು : (1) ಧೂಮ್ರವಸ್ತ್ರ ಹಳೆಯ ಕಾಲದಲ್ಲಿ ರಾಜವಂಶೀಯರು ಧರಿಸುತ್ತಿದ್ದ ಬಣ್ಣದ ವಸ್ತ್ರ (ಎಸ್ತರಳು 8:150: (2) ಚಿನ್ನದ ಹಾರ, ಇದು ಸಾಮಾಜಿಕವಾಗಿ ದೊಡ್ಡಸ್ಥಾನ ಹೊಂದಿರುವುದಕ್ಕೆ ಚಿಹ್ನೆಯಾಗಿತ್ತು (ಆ.ಕಾಂಡ 41:42) ಮತ್ತು (3) ಮೂವರು ಮುಖ್ಯಾಧಿಕಾರಗಳ ಸ್ಥಾನ. ಕಡೆಯ ಬಹುಮಾನವು ಆ ಸಂದರ್ಭದಲ್ಲಿ ಬ್ಯಾಬಿಲೋನಿನಲ್ಲಿದ್ದ ಚಾರಿತ್ರಿಕ ಪರಿಸ್ಥಿತಿಯನ್ನು ಖಚಿತವಾಗಿ ಪ್ರತಿಬಿಂಬಿಸುತ್ತದೆ. ಯಾಕೆಂದರೆ ಬೇಲ್ಶೆಚ್ಚರನು ತನ್ನ ತಂದೆ ನಬೋಡಿನಸ್ಸನ ಸಹಸಾಮ್ರಾಟನಾಗಿದ್ದನು. ಬಹುಮಾನಗಳು ಬಹಳ ಆಮಿಷವುಳ್ಳವುಗಳಾಗಿದ್ದರೂ ಆ ಬರಹದ ಅರ್ಥವನ್ನು ವಿವರಿಸಲು ಬ್ಯಾಬಿಲೋನಿನ ವಿದ್ವಾಂಸರು ವಿಫಲರಾದರು.

ರಾಜನು ತಪ್ಪಾದ ಸ್ಥಳದಲ್ಲಿ ಜ್ಞಾನವನ್ನು ಹುಡುಕುವ ಪ್ರಯತ್ನ ಮಾಡಿದುದು

ಅವನು ಮಾಡಿದ ಎಲ್ಲಾ ಪಾಪಗಳಿಗೆ ಶಿಖರ ಪ್ರಾಯವಾದ ಪಾಪವಾಗಿತ್ತು. ಬ್ಯಾಬಿಲೋನಿನ ವಿದ್ವಾಂಸರು ರಾಜನಿಗೆ ಬರಹವು ನೀಡುವ ಸಂದೇಶದ ಅರ್ಥವನ್ನು ಬಯಲು ಮಾಡಲಾರದೆ ಹೋದರು. ಬರಹವು ಅವರ ಸ್ವಭಾಷೆಯಾದ ಅರಮಾಯಿಕ್ ಭಾಷೆಯಲ್ಲಿದ್ದಾಗ್ಯೂ ವಿದ್ವಾಂಸರು ಅದರ ಅರ್ಥವನ್ನು ತಿಳಿದುಕೊಳ್ಳಲಾರದೆ ಹೋದರು. ನಾಳೆಯ ಪಾಠದಲ್ಲಿ ಇದನ್ನು ಕಾಣುತ್ತೇವೆ. ಯೆಶಾಯನ ಮುಖಾಂತರ ಕರ್ತನು ಹೇಳಿದುದನ್ನು ನೆನಪಿಗೆ ತರುತ್ತದೆ. "ಇವರ ಜ್ಞಾನಿಗಳ ಜ್ಞಾನವು ಅಳಿಯುವುದು, ವಿವೇಕಿಗಳ ವಿವೇಕವು ಅಡಗುವುದು" (ಯೆಶಾಯ 29:14). ಇದನ್ನು ಪೌಲನು ಉಲ್ಲೇಖಿಸುತ್ತಾ "ಜ್ಞಾನಿಯು ಎಲ್ಲಿ? ಶಾಸ್ತ್ರಿಯೆಲ್ಲಿ? ಇಹಲೋಕದ ತರ್ಕವಾದಿ ಎಲ್ಲಿ? ದೇವರು ಇಹಲೋಕದ ಜ್ಞಾನವನ್ನು ಹುಚ್ಚುತನವನ್ನಾಗಿ ಮಾಡಿದ್ದಾನಲ್ಲವೇ. ಹೇಗೆಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೇ; ಹೀಗಾದ ಮೇಲೆ ಹುಚ್ಚು ಮಾತೆನಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವುದು ದೇವರಿಗೆ ಒಳ್ಳೆಯದೆಂದು ತೋಚಿತು" (1 ಕೊರಿಂಥ 1:20,21).

ಕೆಲವು ಸತ್ಯಗಳನ್ನು ಮನುಷ್ಯರು ತಮ್ಮಷ್ಟಕ್ಕೆ ತಾವೇ ಕಂಡುಕೊಳ್ಳುವ ರೀತಿಯಲ್ಲಿ ಬಿಡಲ್ಪಡುವುದಕ್ಕಾಗದಷ್ಟು ಮುಖ್ಯವಾಗಿರುತ್ತವೆ. ಆದುದರಿಂದಲೇ ದೇವರು ಈ ಸತ್ಯಗಳನ್ನು ನಮಗೆ ಪ್ರಕಟಿಸುತ್ತಾನೆ.

ನಮಗೆ ಯಾವ ಬಹುಮಾನಗಳು ಸಿಗುತ್ತವೆ ಎಂಬುದನ್ನು ಆಲೋಚಿಸಿರಿ. ಸಿಕ್ಕ ಬಳಿಕ ನಮ್ಮನ್ನು ತಕ್ಷಣ ಏನು ಹಿಂಬಾಲಿಸುತ್ತವೆ? ಆ ಬಹುಮಾನಗಳು ನಿಜವಾಗಿ ಎಷ್ಟು ನಿಷ್ಪ್ರಯೋಜನಕಾರಿಯಾಗಿವೆ? ಪ್ರಪಂಚದಲ್ಲಿ ಇವೆಲ್ಲವೂ ನಶ್ವರವಾದವುಗಳೆಂಬುದಕ್ಕೆ ಇದು ಏನನ್ನು ಹೇಳುತ್ತದೆ? ಹಾಗಾಗಿ ನಾವು ಯಾವಾಗಲೂ ನಮ್ಮ ದೃಷ್ಟಿಯನ್ನು ನಿತ್ಯತ್ವದ ಕಡೆಗೆ ಇಟ್ಟಿರಬೇಕು ಏಕೆ?

**ಮಂಗಳವಾರ** **ಫೆಬ್ರವರಿ 4**

## ರಾಣಿಯ ಪ್ರವೇಶ

ದಾನಿಯೇಲ 5:9–12 ವಚನಗಳನ್ನು ಓದಿರಿ. ದಾನಿಯೇಲನ ಬಗ್ಗೆ ರಾಜನು

ತಿಳಿದಿರಬೇಕಾಗಿದ್ದ ವಿಷಯವನ್ನು ರಾಣಿಯು ಹೇಳುತ್ತಾಳೆ. ಅದು ಯಾವುದು? ದಾನಿಯೇಲನ ಇರುವಿಕೆಯ ಅರಿವು ರಾಜನಿಗಿಲ್ಲದಿರುವುದರ ಬಗ್ಗೆ ಇದು ಏನನ್ನು ಹೇಳುತ್ತದೆ? ಔತಣ ಶಾಲೆಯಲ್ಲಿದ್ದವರೆಲ್ಲರೂ ಕಾಣದ ಕೈಯೊಂದು ಗೋಡೆಯ ಮೇಲೆ ಬರೆದ ಬರಹವನ್ನು ನೋಡಿ ಕಳವಳಗೊಂಡರು. ಅದನ್ನು ನೋಡಿ ದಿಗಿಲುಗೊಂಡ ರಾಜನಿಗೆ ಮಾರ್ಗದರ್ಶನ ನೀಡಲು ರಾಣಿಯು ಬಂದಳು. ದಾನಿಯೇಲನು ನೆಬೂಕದ್ನೆಚ್ಚರನ ಆಳ್ವಿಕೆಯ ಕಾಲದಲ್ಲಿ ಕನಸುಗಳ ಅರ್ಥವನ್ನು ತಿಳಿಸುವುದರಲ್ಲಿ ಒಗಟು ಬಿಡಿಸುವುದರಲ್ಲಿ ತೋರಿಸಿದ ಜಾಣತನದ ಬಗ್ಗೆ ರಾಜನಿಗೆ ತಿಳಿಸಿದಳು. ಬೇಲ್ಶಚ್ಚರನು ತನ್ನ ತಂದೆಯು ಹೇಗೆ ದಾನಿಯೇಲನಿಂದ ಕನಸಿನ ಅರ್ಥವನ್ನು ತಿಳಿದುಕೊಂಡನೋ ಹಾಗೆಯೇ ಗೋಡೆಯ ಬರಹದ ಅರ್ಥವನ್ನು ತಿಳಿದುಕೊಳ್ಳಬಹುದಾಗಿತ್ತು. ಆದರೆ ರಾಜನಿಗೆ ಮುಂದೇನು ಮಾಡಬೇಕು ಎಂದು ತಿಳಿಯದಾದಾಗ ರಾಣಿಯ ಮಧ್ಯೆ ಪ್ರವೇಶವು ಅವಶ್ಯಕವಾದುದಾಗಿ ಸಾಬೀತುಗೊಂಡಿತು. ಇಡೀ ರಾಜ್ಯದಲ್ಲಿ ರಹಸ್ಯವಾದ ಬರವಣಿಗೆಯನ್ನು ಓದಲು ಶಕ್ತವಾದ ಒಬ್ಬನೇ ವ್ಯಕ್ತಿ ದಾನಿಯೇಲನನ್ನು ರಾಜನು ಉಪೇಕ್ಷೆ ಮಾಡಿದುದರಿಂದ ರಾಣಿಯು ಆತನನ್ನು ಗದರಿಸಿದಂತೆ ಅನ್ನಿಸುತ್ತದೆ. ರಾಣಿಯು ರಾಜನಿಗೆ ದಾನಿಯೇಲನ ಬಗ್ಗೆ ಮೌಖಿಕವಾದ ಪರಿಚಯ ನೀಡಿದಳು. ಪರಿಶುದ್ಧ ದೇವರುಗಳ ಆತ್ಮವು ನೆಲೆಸಿರುವ ಒಬ್ಬನು ನಿನ್ನ ರಾಜ್ಯದಲ್ಲಿ ಇದ್ದಾನೆ. ದೇವರುಗಳ ಜ್ಞಾನಕ್ಕೆ ಸಮಾನವಾದ ಜ್ಞಾನವೂ ವಿವೇಕವೂ ಬುದ್ಧಿ ಪ್ರಕಾಶವೂ ನಿನ್ನ ತಂದೆಯ ಕಾಲದಲ್ಲಿ ಅವನೊಳಗೆ ಕಂಡುಬಂದವು" ಎಂದು ಹೇಳಿದಳು (ದಾನಿ 5:11,12).

ಈ ಒಂದು ಸಂದರ್ಭದಲ್ಲಿ ರಾಜನು ಯಾಕೆ ದಾನಿಯೇಲನನ್ನು ಉಪೇಕ್ಷೆ ಮಾಡಿದನೆಂದು ಆಶ್ಚರ್ಯವಾಗುತ್ತದೆ. ದಾನಿಯೇಲನ ಪುಸ್ತಕದಲ್ಲಿ ಈ ಪ್ರಶ್ನೆಗೆ ನೇರವಾದ ಉತ್ತರ ಸಿಗುವುದಿಲ್ಲವಾದರೂ ದಾನಿಯೇಲನು ರಾಜನ ಆಳ್ವಿಕೆಯ ಮೂರು ವರ್ಷಗಳವರೆಗೆ ಸೇವೆಯಲ್ಲಿದ್ದು ನಂತರ ವಯಸ್ಸಾದ ಕಾರಣ ನಿವೃತ್ತಿಯಾದಂತೆ ಕಾಣುತ್ತದೆ (ದಾನಿ 8:1,27). ಆತನಿಗೆ ಆವಾಗ ಸುಮಾರು 80 ವರ್ಷ ವಯಸ್ಸಾಗಿತ್ತು. ರಾಜನು ಅವನ ಬದಲಿಗೆ ಯೌವನಸ್ಥರನ್ನು ನೇಮಕ ಮಾಡಿಕೊಳ್ಳ ಬಯಸಿದಂತೆ ಕಾಣುತ್ತದೆ. ರಾಜನು ದಾನಿಯೇಲನ ದೇವರಿಗೆ

ಬದ್ಧನಾಗಲೊಲ್ಲದ ಕಾರಣ ದಾನಿಯೇಲನನ್ನು ಉಪೇಕ್ಷಿಸಲು ನಿರ್ಧರಿಸಿರಬಹುದು. ಕಾರಣ ಅಥವಾ ನಾನಾ ಕಾರಣಗಳೇನೇ ಇರಬಹುದು. ಆದರೆ ರಾಜ್ಯದ ಉನ್ನತವಾದ ಹುದ್ದೆಯಲ್ಲಿದ್ದವನನ್ನು ಅಷ್ಟು ಬೇಗ ಮರೆತುದಕ್ಕೆ ಅಚ್ಚರಿಯಾಗುತ್ತದೆ.

ರೋಮ 1:16–32ನ್ನು ಓದಿರಿ. ಇಲ್ಲಿ ವ್ಯಕ್ತವಾಗಿರುವ ತತ್ವವು ಯಾವ ರೀತಿ ಈ ಕಥೆಯಲ್ಲಿ ಮಾತ್ರವಲ್ಲದೆ ಇಂದಿನ ಲೋಕದಲ್ಲಿಯೂ ಪ್ರಕಟವಾಗಿದೆ?

**ಬುಧವಾರ** **ಫೆಬ್ರವರಿ 5**

## ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡುಬಂದಿದ್ದೀ

ಓದಿರಿ : ದಾನಿಯೇಲ 5:13–28. ರಾಜನ ಅಂತ್ಯವು ಆಗುತ್ತದೆಂದು ಶೀಘ್ರದಲ್ಲಿ ಆಗುತ್ತದೆಂಬುದಕ್ಕೆ ದಾನಿಯೇಲನು ಯಾವ ಕಾರಣವನ್ನು ಕೊಟ್ಟಿದ್ದಾನೆ?

ರಾಜನ ಪರಿಸ್ಥಿತಿಯಿಂದ ಒತ್ತಾಯಿಸಲ್ಪಟ್ಟು ದಾನಿಯೇಲನ ಸಲಹೆಯನ್ನು ಪಡೆಯಲು ಅನುವಾದನು ಆದರೆ ರಾಜನು ಒಲ್ಲದ ಮನಸ್ಸಿನಿಂದ ಹಾಗೆ ಮಾಡಿದನು. ಇದು ದಾನಿಯೇಲನ ಬಗೆಗೂ ಆತನ ದೇವರ ಬಗೆಗೂ ರಾಜನಿಗಿದ್ದ ಧೋರಣೆಯನ್ನು ಹೇಳುತ್ತದೆ. ದಾನಿಯೇಲನು ರಾಜನು ಕೊಡುವ ಬಹುಮಾನದ ವಿಷಯದಲ್ಲಿ ಆಡಿದ ಮಾತುಗಳು ಅವನ ಆದ್ಯತೆಗಳ ಮತ್ತು ಗುಣಸ್ವಭಾವಗಳ ಬಗ್ಗೆ ಬಹಳವಾಗಿ ತಿಳಿಸುತ್ತವೆ. ದಾನಿಯೇಲನು ಆ ರಹಸ್ಯವಾದ ಬರಹದ ಅರ್ಥವನ್ನು ತಿಳಿದಿರುವುದಕ್ಕೆ ರಾಜನು ಕೊಡುವ ಬಹುಮಾನವು ನಿಜವಾಗಿಯೂ ಅಲ್ಪವಾದುದಾಗಿತ್ತು. ನಂತರ ದಾನಿಯೇಲನು ರಾಜನನ್ನು ಮೂರು ವಿಷಯಗಳಲ್ಲಿ ಆರೋಪ ಮಾಡಿದನು.

ಮೊದಲನೆಯದು, ಬೇಲ್ಶೆಚ್ಚರನು ನೆಬೂಕದ್ನೆಚ್ಚರಿನಿಗಾದ ಅನುಭವವನ್ನು ಪೂರ್ಣವಾಗಿ ತಾತ್ಸಾರ ಮಾಡಿದನು. ಇಲ್ಲದಿದ್ದರೆ ತನಗಿಂತ ಮೊದಲು ಆಳಿದ ರಾಜನು ತನ್ನನ್ನು ತಗ್ಗಿಸಿಕೊಂಡು ಹೇಗೆ ಪಶ್ಚಾತ್ತಾಪಪಟ್ಟನೋ ಹಾಗೆಯೇ ತಾನು ಮಾಡುತ್ತಿದ್ದನು.

ಎರಡನೆಯದು, ಬೇಲ್ಶೆಚ್ಚರನು ಮದ್ಯಪಾನ ಮಾಡಲು ಯೆರೂಸಲೇಮಿನ ದೇವಾಲಯದಿಂದ ಎತ್ತಿಕೊಂಡು ಬಂದಿದ್ದ ಪಾತ್ರೆಗಳನ್ನು ಉಪಯೋಗಿಸಿದನು

ಮತ್ತು ವಿಗ್ರಹಗಳನ್ನು ಸ್ತುತಿಸಿದನು. ಹಿಂದೆ ಗಮನಿಸಿದ ಪ್ರಕಾರ ವಿಗ್ರಹಗಳನ್ನು ಮಾಡುವುದಕ್ಕೆ ಆರು ವಿಧದ ಸಾಮಗ್ರಿಗಳ ಉಪಯೋಗಿಸಿದ್ದರೆಂದು ದಾನಿಯೇಲನು ಉಲ್ಲೇಖಿಸುತ್ತಾನೆ.

ಮೂರನೆಯದು, "ನಿನ್ನ ಪ್ರಾಣವು ಯಾರ ಕೈಯಲ್ಲಿದೆಯೋ ನಿನ್ನ ಸ್ಥಿತಿಗತಿಗಳು ಯಾರ ಅಧೀನವೋ ಆ ದೇವರನ್ನು ಘನಪಡಿಸಲೇ ಇಲ್ಲ (ದಾನಿ 5:23) ಎಂದು ದಾನಿಯೇಲನು ಹೇಳುವಂತೆ ರಾಜನು ದೇವರನ್ನು ಘನಪಡಿಸಲು ತಾತ್ಸಾರ ಮಾಡಿದನು. ದಾನಿಯೇಲನು ರಾಜನ ವೈಫಲ್ಯಗಳನ್ನು ಮಂಡಿಸುತ್ತಾ ಬರಹದ ಅರ್ಥವನ್ನು ಹೇಳಲು ಅನುವಾದನು. ದೇವರು ಬರೆದ ಗೋಡೆಯ ಮೇಲಿನ ಬರಹವು ಅರ್‍ಯಾಮಿಕ್ ಭಾಷೆಯ ಮೂರು ಕ್ರಿಯಾಪದಗಳನ್ನು ಒಳಗೊಂಡಿದ್ದವು. ಅವುಗಳಲ್ಲಿ ಮೊದಲನೇ ಪದವು ಎರಡು ಸಲ ಬರೆಯಲ್ಪಟ್ಟಿತ್ತು. ಮೆನೇ–ಲೆಕ್ಕಿಸಲ್ಪಡು, ತೆಕೇಲ್–ತೂಗಲ್ಪಡು ಮತ್ತು ಪೆರೇಸ್–ವಿಭಾಗಿಸಲ್ಪಡು ಎಂಬ ಅರ್ಥವು ರಾಜನಿಗೂ ವಿದ್ವಾಂಸರಿಗೂ ತಿಳಿಸಲ್ಪಡಬೇಕಾಗಿತ್ತು.

ಮೇದ್ಯ ಮತ್ತು ಪಾರಸಿಯ ಸೈನ್ಯವು ಬ್ಯಾಬಿಲೋನ್ ಪಟ್ಟಣದ ದ್ವಾರದಲ್ಲಿ ಕಾಣಿಸಿಕೊಂಡಾಗ ಅಶುಭಕಾರಿಯಾಗಿರುವುದಾಗಿ ಸಂಶಯಪಟ್ಟರು ಸಹ ಈ ಅಹಿತವಾದ ವಿಷಯವನ್ನು ರಾಜನಿಗೆ ಹೇಳುವ ಧೈರ್ಯ ಮಾಡಲಿಲ್ಲ. ದಾನಿಯೇಲನು ಮಾತ್ರ ಗೋಡೆ ಬರಹದ ಪೂರ್ಣ ಅರ್ಥವನ್ನು ರಾಜನಾದ ಬೇಲ್ಶೆಚ್ಚರನಿಗೆ ತಿಳಿಸುವ ಸಾಮರ್ಥ್ಯ ಹೊಂದಿದ್ದನೆಂದು ಸಾಬೀತು ಪಡಿಸಿದನು. 'ಮೆನೇ' ಅಂದರೆ ದೇವರು ನಿನ್ನ ಆಳಿಕೆಯ ಕಾಲವನ್ನು ಕೊನೆಗಾಣಿಸಿದ್ದಾನೆ; ತೆಕೇಲ್ ಅಂದರೆ ನೀನು ತಕ್ಕಡಿಯಲ್ಲಿ ಕಡಿಮೆಯಾಗಿ ಕಂಡುಬಂದಿದ್ದೀ; ಪೆರೇಸ್ ಅಂದರೆ ನಿನ್ನ ರಾಜ್ಯವು ಭಿನ್ನವಾಗಿ ಮೇಧ್ಯಯರಿಗೂ ಪಾರಸಿಯರಿಗೂ ಕೊಡಲ್ಪಟ್ಟಿದೆ" (ದಾನಿ 5:26–28).

ಈ ಪದಗಳು ಖಂಡಿತವಾಗಿ ರಾಜನಿಗೆ ಆದರಣೆ ಮತ್ತು ಸಂತೋಷವನ್ನು ನೀಡುವವುಗಳಾಗಿರಲಿಲ್ಲ.

ರಾಜನ ಮೇಲೆ ತೀರ್ಪು ಶೀಘ್ರವಾಗಿ ಬಂತು. ನಮಗೆ ಇನ್ನೂ ನ್ಯಾಯವಾಗಲೀ, ನ್ಯಾಯತೀರ್ಪಾಗಲೀ ಬಂದಿಲ್ಲದಿದ್ದಾಗ್ಯೂ ಇವುಗಳ ವಿಷಯದಲ್ಲಿ ದೇವರನ್ನೇ

ಮೇಲೆ ಆತುಕೊಳ್ಳುವುದನ್ನು (ಭರವಸವಿಡುವುದನ್ನು) ಹೇಗೆ ಕಲಿಯಬಹುದು? (ನೋಡಿರಿ ಪ್ರಸಂಗಿ 7:17, 8ನೇ ಅಧ್ಯಾಯ 11, ಮತ್ತಾಯ 12:36 ಮತ್ತು ರೋಮ 14:12).

**ಗುರುವಾರ** **ಫೆಬ್ರವರಿ 6**

## ಬ್ಯಾಬಿಲೋನಿನ ಪತನ

ದಾನಿಯೇಲ 5:29–31ನ್ನು ಪ್ರಕಟನೆಗಳು 14:8, 16,19 ಮತ್ತು 18:2 ಜೊತೆಗೆ ಓದಿರಿ. ಅಂತ್ಯಕಾಲದ ಬ್ಯಾಬಿಲೋನನ್ನು ಸೂಚಿಸುವ ಬೇಲ್ಶೆಚ್ಚರನ ಬ್ಯಾಬಿಲೋನಿನ ವಿಷಯದಲ್ಲಿ ನಾವು ಏನನ್ನು ಕಲಿಯಬಹುದಾಗಿದೆ?

ಬೇಲ್ಶೆಚ್ಚರನ ತಪ್ಪುಗಳು ಏನೇ ಇರಲಿ ಆತನು ಮಾತಿಗೆ ತಪ್ಪದವನಾಗಿದ್ದನು. ಬರಹದ ಸಂದೇಶವು ಅಶುಭಕಾರಿಯಾಗಿದ್ದರೂ ದಾನಿಯೇಲನು ಹೇಳಿದ ಅರ್ಥದಿಂದ ತೃಪ್ತನಾದನು. ಹಾಗಾಗಿ ದಾನಿಯೇಲನಿಗೆ ಕೊಡುತ್ತೇನೆಂದು ಹೇಳಿದ್ದ ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ದಾನಿಯೇಲನು ಕೊಟ್ಟ ಸಂದೇಶವನ್ನು ಒಪ್ಪಿಕೊಳ್ಳುವುದರ ಮೂಲಕ ರಾಜನು ದಾನಿಯೇಲನ ದೇವರ ವಾಸ್ತವತೆಯನ್ನು ಗುರುತಿಸಿದನು. ಮೊದಲು ರಾಜನ ಬಹುಮಾನವನ್ನು ನಿರಾಕರಿಸಿದ ದಾನಿಯೇಲನು ನಂತರ ಅದನ್ನು ಸ್ವೀಕರಿಸಿದನೆಂಬುದು ಆಸಕ್ತಿಕರವಾಗಿದೆ. ಯಾಕೆಂದರೆ ರಾಜನ ಬಹುಮಾನವು ಬರಹದ ಅರ್ಥಗಾರಿಕೆಯ ಮೇಲೆ ಯಾವ ಪ್ರಭಾವವನ್ನು ಬೀರಬಾರದಾಗಿತ್ತು ಮತ್ತು ರಾಜ್ಯವೇ ಪತನವಾಗುವ ಈ ಸಂದರ್ಭದಲ್ಲಿ ಬಹುಮಾನಕ್ಕೆ ಯಾವ ಅರ್ಥವೂ ಇರಲಿಲ್ಲ. ಬಹುಶಃ ದಾನಿಯೇಲನು ಸೌಜನ್ಯಕ್ಕಾಗಿ ಬ್ಯಾಬಿಲೋನಿನ 3ನೇ ಚಕ್ರವರ್ತಿಯ ಕೆಲವೇ ಗಂಟೆಗಳಲ್ಲಿ ಅಂತ್ಯವಾಗುತ್ತಿದ್ದರೂ ಈ ಬಹುಮಾನವನ್ನು (ಸನ್ಮಾನವನ್ನು ಅವನಿಂದ ಸ್ವೀಕರಿಸುತ್ತಾನೆ).

ನಿಖರವಾಗಿ, ಪ್ರವಾದಿಯಾದ ದಾನಿಯೇಲನು ಪ್ರಕಟಿಸಿದಂತೆ ಬ್ಯಾಬಿಲೋನು ಪತನವಾಯಿತು. ಅತಿ ಶೀಘ್ರದಲ್ಲಿಯೇ ಹಾಗೆ ಆಯಿತು. ರಾಜನು ಮತ್ತು ಆತನ ಪರಿವಾರವು ದ್ರಾಕ್ಷಾರಸ ಕುಡಿಯುತ್ತಿರುವಾಗಲೇ ಯಾವುದೇ ಯುದ್ಧವಿಲ್ಲದೆ ಪಟ್ಟಣವು ಬಿದ್ದುಹೋಯಿತು. ಚರಿತ್ರೆಕಾರನಾದ 'ಹೆರಡಾಟಸ್‌ನ ಪ್ರಕಾರ

ಪಾರಸಿಯರು ಒಂದು ಕಾಲುವೆಯನ್ನು ತೋಡಿ ಯೂಫ್ರಟಿಸ್ ನದಿಯ ಹರಿವನ್ನು ಕಾಲುವೆಗೆ ತಿರುಗಿಸಿದಾಗ ನದಿಯು ಬತ್ತಿತ್ತು, ನದೀಪಾತ್ರದ ಮೇಲೆ ಸೈನ್ಯವು ನಡೆದುಕೊಂಡು ಹೋಗಿ ಪಟ್ಟಣಕ್ಕೆ ಮುತ್ತಿಗೆ ಹಾಕಿತ್ತು. ಅದೇ ರಾತ್ರಿಯಲ್ಲಿ ರಾಜನು ಕೊಲ್ಲಲ್ಪಟ್ಟನು. ಆತನ ತಂದೆಯಾದ 'ನಬಾನಿದಸ್' ಪಟ್ಟಣವನ್ನು ಬಿಟ್ಟುಹೊರಟು ಹೋಗಿದ್ದನು, ನಂತರ ಹಿಂದಿರುಗಿ ಬಂದು ಪಾರಸಿಯ ರಾಜನಿಗೆ ಶರಣಾದನು. ಅದುವರೆಗೆ ಮಾನವ ಜನಾಂಗಕ್ಕೆ ಗೊತ್ತಿದ್ದ ಮಹಾಸಾಮ್ರಾಜ್ಯವಾದ ಬ್ಯಾಬಿಲೋನ್ ಈ ರೀತಿಯಲ್ಲಿ ಕೊನೆಯಾಯ್ತು. ಬಂಗಾರದ ತಲೆಯಾದ ಬ್ಯಾಬಿಲೋನ್ ಅಳಿದುಹೋಯ್ತು. "ಬೇಲ್ಶೆಚ್ಚರನಿಗೆ ದೇವರ ಚಿತ್ತವನ್ನು ಅರಿಯುವ ಮತ್ತು ಅದರಂತೆ ನಡೆಯುವ ಅನೇಕ ಅವಕಾಶಗಳು ಕೊಡಲ್ಪಟ್ಟಿದ್ದವು. ತನ್ನ ತಂದೆಯ ತಂದೆಯಾದ ನೆಬೂಕದ್ನೆಚ್ಚರನು ಜನರ ಮಧ್ಯದಿಂದ ತಳ್ಳಲ್ಪಟ್ಟದ್ದನ್ನು ಆತನು ತಿಳಿದಿದ್ದನು. ಹೆಮ್ಮೆಯಿಂದ ತನ್ನನ್ನು ತಾನು ಹೆಚ್ಚಿಸಿಕೊಂಡಿದ್ದ ರಾಜನ ಬುದ್ಧಿಯು ಯಾವಾತನಿಂದ ಕೊಡಲ್ಪಟ್ಟಿತೋ ಅವನಿಂದಲೇ ತೆಗೆಯಲ್ಪಟ್ಟಿದ್ದನ್ನು ನೋಡಿದ್ದನು. ರಾಜನು ರಾಜ್ಯದಿಂದ ನೂಕಲ್ಪಟ್ಟು ಕಾಡಿನಲ್ಲಿ ಪ್ರಾಣಿಗಳೊಂದಿಗೆ ಹುಲ್ಲುಮೇಯುವಂತೆ ಆದದ್ದನ್ನು ನೋಡಿದ್ದನು. ಆದರೆ ರಂಜನೆ (ಪಾನಗೋಷ್ಠಿ) ಮತ್ತು ಸ್ವ-ವೈಭವೀಕರಣದ ಮೇಲೆ ರಾಜನಿಗಿದ್ದ ಅತೀ ಪ್ರೀತಿಯು ಅವನು ಮರೆಯಲೇಬಾರದ ಪಾಠಗಳನ್ನು ಅಳಿಸಿಬಿಟ್ಟಿತು. ನೆಬೂಕದ್ನೆಚ್ಚರನಿಗೆ ಯಾವ ಪಾಪಗಳಿಂದ ದೇವರ ನ್ಯಾಯತೀರ್ಪು ಆಯಿತೋ ಅದೇ ಪಾಪಗಳನ್ನು ಬೇಲ್ಶೆಚ್ಚರನೂ ಮಾಡಿದನು. ಸತ್ಯದ ಪರಿಚಯ ಆಗುವ ಹಾಗೆ ದೇವರಿಂದ ಕೊಡಲ್ಪಟ್ಟ ಕೃಪಾವಕಾಶಗಳನ್ನು ಆತನು ವ್ಯರ್ಥಪಡಿಸಿಕೊಂಡನು"– ಎಲೆನ್ ಜಿ ವೈಟಮ್ಮನವರ ಬೈಬಲ್ ಇಕೋ, ಏಪ್ರಿಲ್ 25, 1898.

ನಮಗೆ ಸತ್ಯದ ಪರಿಚಯವಾಗುವಂತೆ ಯಾವ ಅವಕಾಶಗಳಿವೆ? ಇದರ ಅರ್ಥವೇನು? ಗೊತ್ತಿರಬೇಕಾದ ಎಲ್ಲಾ ಸತ್ಯಗಳು ಗೊತ್ತಾಗಿವೆಯೆಂದು ಯಾವಾಗ ಹೇಳಬಹುದು?

**ಶುಕ್ರವಾರ** **ಫೆಬ್ರವರಿ 7**

**ಹೆಚ್ಚಿನ ಚಿಂತನೆ :** ದೊಡ್ಡದೊಡ್ಡ ಉತ್ಸವಗಳು ಪುರಾತನ ಕಾಲದ ರಾಜರ ಆಸ್ಥಾನದಲ್ಲಿ ಸರ್ವೇ ಸಾಮಾನ್ಯವಾಗಿದ್ದವು. ರಾಜರು ಅದ್ಧೂರಿಯಾದ ಐಷಾರಾಮಿ

ಕೂಟಗಳನ್ನು ಆಗಾಗ್ಗೆ ಏರ್ಪಡಿಸಿ ತಮ್ಮ ಮಹತ್ವವನ್ನು, ವಿಶ್ವಾಸವನ್ನು ಪ್ರಜೆಗಳಿಗೆ ತೋರಿಸುತ್ತಿದ್ದರು. ಬೇಲ್ಶೆಚ್ಚರನ ಪಾನಗೋಷ್ಠಿಯ ಪೂರ್ಣ ವಿವರಗಳು ನಮಗೆ ತಿಳಿದಿಲ್ಲದಿದ್ದರೂ ಈ ಗೋಷ್ಠಿಯು ನಡೆಯುತ್ತಿರುವಾಗಲೇ ಮೇದ್ಯಪಾರಸಿಯ ಸೈನ್ಯವು ಬ್ಯಾಬಿಲೋನನ್ನು ಮುತ್ತಿಗೆ ಹಾಕಿತೆಂಬುದು ನಮಗೆ ತಿಳಿದಿದೆ. ಮಾನುಷ್ಯ ರೀತಿಯಲ್ಲಿ ಮಾತಾಡುವುದಾದರೆ ಬ್ಯಾಬಿಲೋನಿನ ಸುತ್ತ ಕೋಟೆ ಇದ್ದುದರಿಂದ, ಅನೇಕ ವರ್ಷಗಳಿಗೆ ಬೇಕಾದ ಆಹಾರ ಸಾಮಗ್ರಿಯ ಸರಬರಾಜಿನಿಂದ ಪಟ್ಟಣದ ಮಧ್ಯಭಾಗದಿಂದ ನದಿಯ ನೀರು ಹರಿಯುತ್ತಿದ್ದರಿಂದ ಯಾವುದಕ್ಕೂ ಚಿಂತಿಸುವ ಅಗತ್ಯವಿರಲಿಲ್ಲ. ಆದುದರಿಂದ ದೇವರು ರಾಜನಾದ ಬೇಲ್ಶೆಚ್ಚರನಿಗೆ ಯಾವ ಸಮಸ್ಯೆಯೂ ಕಾಣಲಿಲ್ಲ. ಎಂತಲೇ ಆತನು ಮಹತ್ತರವಾದ ಪಾನಗೋಷ್ಠಿಯ ಆಚರಣೆಗೆ ಆದೇಶ ಹೊರಡಿಸಿದನು. ಕೂಡಲೇ ಅದು ಸ್ವೇಚ್ಛಾಚಾರದ ಮಟ್ಟಕ್ಕೆ ಇಳಿಯಿತು. ದೇವರಶಕ್ತಿಗೆ ಎದುರಾಗಿ ಮಾನವನ ಗರ್ವ ಮತ್ತು ವಿಶ್ವಾಸ ನುಚ್ಚುನೂರಾಗುತ್ತದೆ ಎಂಬುದಕ್ಕೆ ಇದು ಎಂಥಾ ಸಾಕ್ಷಿ ನೀಡುತ್ತದೆಯಲ್ಲವೆ. ಶತ್ರುವಿನ ಸೈನ್ಯವು ಪಟ್ಟಣವನ್ನು ಸುತ್ತುವರೆದಿದ್ದರೂ ರಾಜನಿಗೆ ಸತ್ಯವನ್ನು ತಿಳಿಯುವ ಅವಕಾಶಗಳನ್ನು ದಾನಿಯೇಲನ ಮೂಲಕ ಕೊಟ್ಟನು. ‘ನಿನ್ನ ಪ್ರಾಣವು ಯಾರ ಕೈಯಲ್ಲಿದೆಯೋ ನಿನ್ನ ಸ್ಥಿತಿಗತಿಗಳು ಯಾರ ಅಧೀನವೋ ಆ ದೇವರನ್ನು ಘನಪಡಿಸಲೇ ಇಲ್ಲ" (ದಾನಿ 5:23). "ಜನಾಂಗಗಳ (ದೇಶಗಳ) ಚರಿತ್ರೆಯು ಪ್ರತೀ ವ್ಯಕ್ತಿಗೂ ದೇವರು ತನ್ನ ಮಹಾಯೋಜನೆಯಲ್ಲಿ ಒಂದು ಸ್ಥಾನ (ಸ್ಥಳ)ವನ್ನು ಕೊಟ್ಟಿದ್ದಾನೆ. ಇಂದು ಮನುಷ್ಯರು ಮತ್ತು ದೇಶಗಳು ತಪ್ಪನ್ನೇ ಮಾಡದ ದೇವರ ಕೈಯಲ್ಲಿರುವ ತೂಕದ ಗುಂಡಿನಿಂದ ಪರೀಕ್ಷಿಸಲ್ಪಡುತ್ತಿದ್ದಾರೆ ಮತ್ತು ಪರೀಕ್ಷಿಸಲ್ಪಡುತ್ತಿವೆ. ಪ್ರತಿಯೊಬ್ಬರ ಆಯ್ಕೆಗಳು ಅವರವರ ಗತಿಯನ್ನು ನಿರ್ಧರಿಸುತ್ತವೆ. ದೇವರು ತನ್ನ ಉದ್ದೇಶ ಸಾಧನೆಗೆ ಎಲ್ಲವನ್ನೂ ಆಳುತ್ತಾನೆ. ಎಲೆನ್ ಜಿ ವೈಟಮ್ಮನವರ ಪ್ರಾಫೆಟ್ಸ್ ಅಂಡ್ ಕಿಂಗ್ಸ್ ಪುಸ್ತಕದಲ್ಲಿ ಪುಟ 536.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಲ್ಲಿ ಭಾನುವಾರ ಪಾಠದಲ್ಲಿ ಸಮಾಜ ಮತ್ತು ಸಂಸ್ಕೃತಿಯು ದೇವರ ಸತ್ಯವನ್ನು ಭ್ರಷ್ಟಗೊಳಿಸುವ ವಿಧಾನಗಳ ಬಗ್ಗೆ ಬರುವ ಪ್ರಶ್ನೆಗಳಿಗೆ ಉತ್ತರವನ್ನು ಚರ್ಚಿಸಿರಿ? ಆ ವಿಧಾನಗಳು ಯಾವುವು? ಇಂತಹ ಭ್ರಷ್ಟತೆಗಳಿಗೆ

ವೈಯಕ್ತಿಕವಾಗಿ ಮತ್ತು ಸಭೆಯಾಗಿ ನಾವು ಹೇಗೆ ಸ್ಪಂದಿಸಬಹುದು?

2. ರಕ್ಷಣೆಯೆಂಬುದು ನಮಗೇನು ಗೊತ್ತು ಎಂಬುದಲ್ಲ ನಮಗೆ ಗೊತ್ತಿರುವುದಕ್ಕೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದಾಗಿದೆ ಎನ್ನುವ ವಿಷಯದ ಬಗ್ಗೆ ಈ ಕಥೆಯು ನಮಗೆ ಏನನ್ನು ಬೋಧಿಸುತ್ತದೆ? (ದಾನಿ 5:22).

3. ದಾನಿಯೇಲ 5:23ನ್ನು ಓದಿರಿ. ಈ ವಚನಗಳಲ್ಲಿ ಮುಖ್ಯವಾದ ಯಾವ ಆತ್ಮೀಕ ನಿಯಮಗಳು ಇವೆ. ಉದಾಹರಣೆಗೆ ಈ ವಾಕ್ಯವು ದೇವರನ್ನು ಧಿಕ್ಕರಿಸುವುದರ ಬಗ್ಗೆ ಹೇಗೆ ಎಚ್ಚರ ಕೊಡುತ್ತದೆ? ದೇವರು ನಮ್ಮನ್ನು ಸೃಷ್ಟಿಸಿದವನು ಮಾತ್ರವಾಗಿರದೆ ನಮ್ಮ ಅಸ್ತಿತ್ವವನ್ನು ಉಳಿಸುವವನೂ ಆಗಿರುತ್ತಾನೆಂಬುದಕ್ಕೆ ಈ ವಾಕ್ಯವು ನಮಗೆ ಏನನ್ನು ಬೋಧಿಸುತ್ತದೆ?

4. ಗೋಡೆಯ ಮೇಲೆ ಬರೆದ ಬರಹವು ಏನೆಂಬುದು ತಿಳಿಯದಿದ್ದರೂ ರಾಜನಾದ ಬೇಲ್ಶೆಚ್ಚರನು ಭೀತನಾಗುತ್ತಾನೆ (ದಾನಿ 5:6). ಮನಸ್ಸಾಕ್ಷಿಗೆ ವಿರೋಧವಾಗಿ ಜೀವಿಸುವುದೆಂದರೆ ಏನೆಂಬುದರ ಬಗ್ಗೆ ಇದು ಹೇಳುವುದೇನು?